ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಆಯುಕ್ತರವರ ಕಛೇರಿ, ಗ್ರಾ.ಕು.ನೀ.&ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009. ☎ : 080–22240508 📠 : 22240509 ಈ-ಮೇಲ್: krwssd@gmail.com

ಸಂ.ಗ್ರಾಅಪ/41/ಗ್ರಾನೀಸ(2)/2015

ದಿನಾಂಕ: 06–02–2015

**ಅತಿ ಪ್ರಾಮುಖ್ಯವಾದದ್ದು**

## ಸುತ್ತೋಲೆ

ವಿಷಯ:– 2015–16ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (NRDWP) ಅಡಿ ಬ್ಯಾಂಕ್‌ನಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31 ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

– – –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (NRDWP) ಅಡಿ 2015–16ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಬ್ಯಾಂಕ್‌ನಲ್ಲಿ ತೀರ್ಣಗೊಳಿಸುವ ಸಲುವಾಗಿ ದಿನಾಂಕ 31–03–2016 ರಂದು ಅಂತಿಮ ದಿನವೆಂದು ನಿಗಧಿ ಪಡಿಸಿರುವ ಹಿನ್ನೆಲೆಯಲ್ಲಿ, NRDWP ಅಡಿ ವಿವಿಧ ಘಟಕವಾರು ಬಿಲ್ಲುಗಳನ್ನು ಬ್ಯಾಂಕ್‌ನಲ್ಲಿ ಸ್ವೀಕರಿಸಲು ದಿನಾಂಕ 25–03–2016 ಅಂತಿಮ ದಿನವಾಗಿರುತ್ತದೆ. ದಿನಾಂಕ 25–03–2016 ರವರೆಗೆ ಸ್ವೀಕರಿಸಿದ ಬಿಲ್ಲುಗಳನ್ನು ಘಟಕವಾರು ಅನುದಾನದ ಲಭ್ಯತೆಗನುಗುಣವಾಗಿ ಬ್ಯಾಂಕ್‌ನವರು ದಿನಾಂಕ 31–03–2016 ರವರೆಗೆ ಪಾವತಿಸತಕ್ಕದ್ದು. ಹಾಗೂ ಆಯಾಯ ಘಟಕವಾರು ಲಭ್ಯವಿರುವ ಅನುದಾನದ ಮಿತಿಯೊಳಗೆ ಆಯಾಯ ಘಟಕದಡಿ ಬರುವ ಬಿಲ್ಲುಗಳನ್ನು ಪಾವತಿಸತಕ್ಕದ್ದು. ಹಾಗೂ ಇತರೆ ಘಟಕದಡಿ ಪಾವತಿಯಾಗದಂತೆ ಕ್ರಮ ವಹಿಸತಕ್ಕದ್ದು. ವಿಶೇಷವಾಗಿ ಕೇಂದ್ರ ವಲಯದಡಿ ಬಿಡುಗಡೆಯಾದ ಅನುದಾನವನ್ನು ಶೇ.100 ಖರ್ಚು ಮಾಡಲು ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರು ಕ್ರಮ ವಹಿಸುವುದು.

ಮುಂದುವರೆದು, 2015–16ನೇ ಸಾಲಿನಲ್ಲಿ ದಿನಾಂಕ 31–03–2016 ರವರೆಗೆ ಪಾವತಿಸಿದ ಸಂಬಂಧ ಜಿಲ್ಲಾವಾರು ಬ್ಯಾಂಕ್ ಪಾಸ್ ಶೀಟ್ ಅನ್ನು ಬ್ಯಾಂಕ್‌ನವರು ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳಿಗೆ ಲೆಕ್ಕ ಮರುಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಕಳುಹಿಸಿಕೊಡತಕ್ಕದ್ದು. ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರು ಲೆಕ್ಕ ಮರುಹೊಂದಾಣಿಕೆಯಾದ ಕೂಡಲೇ IMIS ನಲ್ಲಿ ಇಂದೀಕರಿಸತಕ್ಕದ್ದು. ವಿಭಾಗವಾರು ದಿನಾಂಕ 31–03–2016 ರ ಬ್ಯಾಂಕ್ ಪ್ರಕಾರ ಆಗಿರುವ ಖರ್ಚು ಮತ್ತು IMIS ನಲ್ಲಿ ಇಂದೀಕರಿಸಿರುವ ಖರ್ಚು ತಾಳೆ ಹೊಂದತಕ್ಕದ್ದು. IMIS ಖರ್ಚು ಹಾಗೂ ಬ್ಯಾಂಕ್ ಪ್ರಕಾರ ಆಗಿರುವ ಖರ್ಚು ತಾಳೆ ಹೊಂದದಿದ್ದಲ್ಲಿ, ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರೇ ನೇರ ಹೊಣೆಗಾರರಾಗುತ್ತೀರಿ.

6/2/16

(ಎಂ. ಮಂಜುನಾಥ ನಾಯಕ್)
ಆಯುಕ್ತರು ಹಾಗೂ ಪದನಿಮಿತ್ತ
ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾ.ಕು.ನೀ & ನೈ ಇಲಾಖೆ.

ಪ್ರತಿಯನ್ನು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತ್‌ಗಳು.
2. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗಗಳು, ರಾಜ್ಯದ ಎಲ್ಲಾ 31 ವಿಭಾಗ ಕಛೇರಿಗಳು
3. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
4. ಮ್ಯಾನೇಜರ್, ಕಾರ್ಪೋರೇಷನ್ ಬ್ಯಾಂಕ್, ಮಲ್ಲೇಶ್ವರ ಶಾಖೆ, ಸಂಪಿಗೆ ರಸ್ತೆ, ಬೆಂಗಳೂರು.